**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 584/2024**

**ಚಾ.ಸಾಃ 5, ಫಿ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ವೆಂಕಟೇಶ ನಾಯ್ಕ |
| ತಂದೆಯ ಹೆಸರು | ಸುಬ್ರಾಯ ನಾಯ್ಕ |
| ವಯಸ್ಸು | 45 ವರ್ಷಗಳು |
| ಉದ್ಯೋಗ | ಹೋಟೆಲ್ |
| ವಾಸ್ತವ್ಯ | ಮೇಲಿನ ಇಡಗುಂಜಿ, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 13-03-2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿದ್ದೇನೆ.

ದಿನಾಂಕ 20-09-2024 ರಂದು ಮಂಕಿ ಪಿಎಸ್ಐ ರವರು ನನ್ನನ್ನು ಠಾಣೆಗೆ ಕರೆದು ಒಂದು ಪಂಚನಾಮೆಗೆ ಸಹಕರಿಸುವಂತೆ ಕೇಳಿದರು. ಅದರಂತೆ ನಾನು ಠಾಣೆಗೆ ಹೋದಾಗ ಠಾಣೆಯ ಮುಂಭಾಗದಲ್ಲಿ ಒಂದು ಸ್ವಿಫ್ಟ ಕಾರಿನಲ್ಲಿ 2 ಬ್ಯಾಟರಿಗಳು ಮತ್ತು ಒಂದು ಹಾರೆ ಇತ್ತು. ಆ ಕಾಲಕ್ಕೆ ಆರೋಪಿತರು ಪೋಲೀಸ್ ಠಾಣೆಯಲ್ಲಿದ್ದು ಪೋಲಿಸರು ಸದರಿ ಬ್ಯಾಟರಿಗಳನ್ನು ಆರೋಪಿತರು ಕಳ್ಳತನ ಮಾಡಿದ್ದು ಕಳ್ಳತನ ಮಾಡಲು ಹಾರೆಯನ್ನು ಉಪಯೋಗಿಸಿರುವುದಾಗಿ ಹೇಳಿ ತೋರಿಸಿರುತ್ತಾರೆ. ಆ ಕಾಲಕ್ಕೆ ಪೋಲೀಸರು ನನ್ನ ಮುಂದೆ ಅವುಗಳ ಫೋಟೋ ತೆಗೆದು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಫೋಟೋವನ್ನು ಈಗ ನೋಡುತ್ತಿದ್ದು ನಿಪಿ-4 ಎಂದು ಗುರುತಿಸಲಾಯಿತು. ನಂತರ ಪೋಲಿಸರು ಕಳ್ಳತನ ಆಗಿರುವ ಅಂಗಡಿಗೆ ಕರೆದುಕೊಂಡು ಬಂದಿದ್ದು ಸದರಿ ಅಂಗಡಿಯು ಮಂಕಿಯ ಮುಖ್ಯರಸ್ತೆಯಲ್ಲಿ ಇದ್ದು ಅದೇ ಅಂಗಡಿಯ ಪಕ್ಕದಲ್ಲಿ ನಮ್ಮ ಹೋಟೆಲ್ ಇರುತ್ತದೆ. ಸದರಿ ಅಂಗಡಿಯಲ್ಲಿ ಆರೋಪಿತರು ಏರಗನಗಳನ್ನು ಕಳ್ಳತನ ಮಾಡಿದ್ದರು. ಅಲ್ಲಿಯೂ ಸಹ ನನ್ನ ಸಹಿ ತೆಗೆದುಕೊಂಡು ಫೋಟೋ ತೆಗೆಸಿರುತ್ತಾರೆ. ಸದರಿ ಫೋಟೋವನ್ನು ನೋಡುತ್ತಿದ್ದು ನಿಪಿ-5 ಎಂದು ಗುರುತಿಸಲಾಯಿತು. ಅಂಗಡಿಯ ಪಕ್ಕದಲ್ಲಿ ನಿಲ್ಲಿಸಿದ್ದ ಒಂದು ಟಿಪ್ಪರ್ ಲಾರಿ ಮತ್ತು ಜೆಸಿಬಿಯಲ್ಲಿ ಆರೋಪಿತರು ಬ್ಯಾಟರಿ ಕಳ್ಳತನ ಮಾಡಿದ್ದು ಅಲ್ಲಿಯೂ ಸಹ ಪೋಲೀಸರು ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋವನ್ನು ನೋಡುತ್ತಿದ್ದು ನಿಪಿ-6 ಎಂದು ಗುರುತಿಸಲಾಯಿತು. ನಂತರ ಪೋಲೀಸರು ಪಂಚನಾಮೆಗೆ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-7 ಎಂದು, ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಪೋಲೀಸರು ಅಮಾನತ್ತುಪಡಿಸಿಕೊಂಡ ಬ್ಯಾಟರಿ ಮತ್ತು ಹಾರೆ ಮತ್ತು ಕಾರನ್ನು ನೋಡಿದರೆ ಗುರುತಿಸುತ್ತೇನೆ. ನಿಪಿ-4 ರ ಫೋಟೋದಲ್ಲಿ ಇರುವ ಬ್ಯಾಟರಿ ಮತ್ತು ಕಾರನ್ನು ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಹಾರೆಯನ್ನು ನೋಡಿ ಗುರುತಿಸಿರುತ್ತಾರೆ. ಹಾರೆಯನ್ನು ಮುಮಾ-1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಆರ್. ನಾಯ್ಕರಿಂದಃ**

ಮಂಕಿ ಪಿಎಸ್ಐ ರವರು ಆಗಾಗ ನಮ್ಮ ಹೋಟೆಲ್‌ಗೆ ಚಹ ಕುಡಿಯಲು ಬಂದು ಹೋಗುವುದರ ಮೂಲಕ ಪರಿಚು ಎಂದರೆ ಸರಿ. ಬ್ಯಾಟರಿ ಕಳುವಿನ ವಿಚಾರ ಕಳುವಾಗಿದ್ದ ಮರುದಿನವೇ ಗೊತ್ತಾಗಿತ್ತು. ಹೋಟೆಲ್ ಇರುವ ಕಾಂಪ್ಲೆಕ್ಸನಲ್ಲಿ ಸಿಸಿ ಕ್ಯಾಮರಾ ಇದೆ. ಪೋಲೀಸರು ಅದನ್ನು ಪರಿಶೀಲಿಸಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಟಿಪ್ಪರ್ ಮತ್ತು ಜೆಸಿಬಿ ನಿಲ್ಲಿಸಿದ ಸ್ಥಳವು ನಮ್ಮ ಹೋಟೆಲ್ ಎದುರಿನಲ್ಲಿ ಎಂದರೆ ಸರಿ. ನನ್ನ ಹೋಟೆಲ್ ಒಳಗೆ ಮತ್ತು ಹೊರಗೆ ಸಿಸಿ ಕ್ಯಾಮರಾ ಇದೆ. ನಮ್ಮ ಹೋಟೆಲ್‌ನ ಸಿಸಿ ಕ್ಯಾಮರಾ ಫುಟೇಜನ್ನು ಪೋಲೀಸರು ತೆಗೆದುಕೊಂಡು ಹೋಗಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಕಳ್ಳತನ ಆಗುವ ಕಾಲಕ್ಕೆ ನಾನು ಬೇರೆ ಕೆಲಸದ ನಿಮಿತ್ತ ಹೊರಗೆ ಹೋಗಿದ್ದೆ. ಕಳ್ಳತನ ಆದ ನಂತರ ನಾನು ಯಾರು ಕಳುವು ಮಾಡಿದ್ದಾರೆ ಎಂಬ ಬಗ್ಗೆ ಸಿಸಿ ಟಿವಿಯನ್ನು ಪರಿಶೀಲಿಸಿಲ್ಲ. ಕಳುವಾಗಿದ್ದ ಅಂಗಡಿ ಮಾಲಿಕ ನನಗೆ ಪರಿಚಯ. ಸದರಿ ಅಂಗಡಿಯ ಮಾಲಿಕ ನಮ್ಮ ಹೋಟೆಲ್‌ನ ಸಿಸಿ ಕ್ಯಾಮರಾ ಫುಟೇಜನ್ನು ತೋರಿಸುವಂತೆ ನನ್ನನ್ನು ಕೇಳಿಲ್ಲ ಮತ್ತು ನನ್ನ ಮುಂದೆ ನೋಡಿಲ್ಲ. ಆರೋಪಿತರು ಬ್ಯಾಟರಿಗಳನ್ನು ಮತ್ತು ಏರಗನ್ನನ್ನು ಸ್ವಿಫ್ಟ್ ಕಾರಿನಲ್ಲಿ ಬಂದು ಕಳುವು ಮಾಡಿಕೊಂಡು ಹೋಗಿದ್ದಾರೆ ಎಂದು ಮರುದಿನ ಗೊತ್ತಾಯಿತು. ಸದರಿ ವಿಚಾರವನ್ನು ಸಾರ್ವಜನಿಕರು ಮಾತನಾಡಿಕೊಳ್ಳುತ್ತಿದ್ದರು. ಆದ್ದರಿಂದ ಗೊತ್ತಾಯಿತು.

ಪಂಚನಾಮೆಗೆ ಪೋಲೀಸರು 12-00 ಗಂಟೆ ಸಮಯಕ್ಕೆ ಫೋನ್ ಮಾಡಿ ಕರೆಸಿರುತ್ತಾರೆ. ಪೋಲೀಸರು ಫೋನ್ ಮಾಡಿದಾಗ ಕಳುವಾಗಿದ್ದ ಬ್ಯಾಟರಿ ಮತ್ತು ಏರಗನ್‌ಗಳು ಸಿಕ್ಕಿದ್ದು ಅದರ ವಿಚಾರವಾಗಿ ಠಾಣೆಗೆ ಬರಬೇಕು ಎಂದು ತಿಳಿಸಿದರು. ನಾನು ಪೋಲೀಸ್ ಠಾಣೆಗೆ ಹೋದಾಗ ಅಲ್ಲಿ ಚಾಸಾ-4 ಮತ್ತು ಆರೋಪಿತರು ಠಾಣೆಯಲ್ಲಿ ಇದ್ದರು. ನಾನು ಠಾಣೆಗೆ ಹೋದಾಗ ಆರೋಪಿತರು ಪೋಲೀಸ್ ಠಾಣೆಯ ಹೊರಗೆ ಕಾರಿನ ಹತ್ತಿರ ಇದ್ದರು. ನಾನು ಕಾರಿನ ಹತ್ತಿರ ಹೋದಾಗ ಆರೋಪಿತರು ಕಾರನ್ನು ತೋರಿಸಿ ಕಳುವು ಮಾಡಿರುವ ವಸ್ತುಗಳು ಕಾರಿನಲ್ಲಿ ಇವೆ ಎಂದು ಹೇಳಿದರು. ನಂತರ ಕಾರನ್ನು ತೆಗೆದು ತೋರಿಸಿದರು. ಕಾರಿನಲ್ಲಿ ಬ್ಯಾಟರಿ ಮತ್ತು ಹಾರೆ ಇತ್ತು. ಕಾರನ್ನು ಪೋಲೀಸ್ ಠಾಣೆಗೆ ಯಾರು ತೆಗೆದುಕೊಂಡು ಬಂದಿರುತ್ತಾರೆ ಎನ್ನುವ ವಿಚಾರವನ್ನು ಪೋಲೀಸರು ನನಗೆ ಹೇಳಲಿಲ್ಲ. ಸದರಿ ದಿನಕ್ಕೆ ಮೊದಲು ಆರೋಪಿತರ ಬಗ್ಗೆ ನನಗೆ ಯಾವುದೇ ಮಾಹಿತಿ ಇರಲಿಲ್ಲ. ಆರೋಪಿತರು ತಮ್ಮ ಹೆಸರುಗಳನ್ನು ಪೋಲೀಸರಿಗೆ ಹೇಳುತ್ತಿದ್ದರು. ಮೊದಲನೇ ಬಾರಿಗೆ ಕಾರಿನ ಹತ್ತಿರ ನನ್ನನ್ನು ಕರೆದುಕೊಂಡು ಹೋದಾಗ ಕಾರಿನ ಡಿಕ್ಕಿ ಮುಚ್ಚಲಾಗಿತ್ತು. ನಂತರ ಅದನ್ನು ಪೋಲೀಸರು ತೆಗೆದು ತೋರಿಸಿರುತ್ತಾರೆ. ಕಾರಿನಲ್ಲಿದ್ದ ಬ್ಯಾಟರಿಯ ನಂಬರನ್ನು ನಾನು ಪೋಲೀಸರಿಗೆ ತೋರಿಸಿ ಹೇಳಲಿಲ್ಲ. ಸದರಿ ಬ್ಯಾಟರಿ ಯಾವ ಕಂಪನಿಗೆ ಸೇರಿದ್ದು ಅಂತ ನನಗೆ ನೆನಪಿಲ್ಲ. ಕಾರು, ಕಾರಿನಲ್ಲಿದ್ದ ಹಾರೆ ಮತ್ತು ಬ್ಯಾಟರಿ ಪಕ್ಕದಲ್ಲಿ ನಮ್ಮನ್ನು ನಿಲ್ಲಿಸಿ ಪೋಟೋ ತೆಗೆಸಿರುತ್ತಾರೆ. ಕಿರಣರವರ ಪೂರ್ತಿ ಹೆಸರು ನನಗೆ ಗೊತ್ತಿಲ್ಲ. ಕಿರಣ ಎಂಬುವವರು ಪೋಲೀಸ್ ಠಾಣೆಯಲ್ಲೇ ನನಗೆ ಪರಿಚಯ. ಅದಕ್ಕೂ ಮೊದಲು ನನಗೆ ಗೊತ್ತಿಲ್ಲ. ನಾನು ಠಾಣೆಗೆ ಹೋಗುವ ಮೊದಲೇ ಆತ ಠಾಣೆಯಲ್ಲಿ ಇದ್ದರು. ಫೋಟೋ ತೆಗೆದ ನಂತರ ಸ್ಥಳದಲ್ಲಿ ಯಾವುದೇ

ಬರವಣಿಗೆಗಳನ್ನು ಮಾಡಲಿಲ್ಲ. ಮುಮಾ-1 ರ ಹಾರೆ ಕಾರಿನ ಡಿಕ್ಕಿಯಲ್ಲಿತ್ತು. ಪೋಲೀಸ್ ಠಾಣೆಯಿಂದ ನಂತರ ಕಳುವು ಸ್ಥಳಕ್ಕೆ ಜೀಪಿನಲ್ಲಿ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ಜೀಪಿನಲ್ಲಿ ಹೋಗುವ ಪೂರ್ವದಲ್ಲಿ ಆರೋಪಿತರಿಗೂ ನಮಗೂ ಮತ್ತು ಪೋಲೀಸರಿಗೂ ಮಾತುಕತೆ ಆಗಲಿಲ್ಲ. ಘಟನಾ ಸ್ಥಳಕ್ಕೆ ಹೋದಾಗ ಆರೋಪಿತರು ತಾವು ಇದೇ ಅಂಗಡಿಯಲ್ಲಿ ಕಳ್ಳತನ ಮಾಡಿರುವುದಾಗಿ ಅಂಗಡಿಯನ್ನು ತೋರಿಸಿರುತ್ತಾರೆ. ಯಾವುದೇ ಮಾತುಕತೆ ಆಗಲಿಲ್ಲ. ಸದರಿ ಅಂಗಡಿಯ ಶಟರ್ನ ಬಲಭಾಗವನ್ನು ಮುರಿದಿರುವುದಾಗಿ ತೋರಿಸಿರುತ್ತಾರೆ. ಆರೋಪಿತರು ಪೋಲೀಸರನ್ನು ಅಂಗಡಿಯ ಒಳಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಅಂಗಡಿಯ ಒಳಗೆ ಹೋಗಲಿಲ್ಲ. ನಂತರ ಅಂಗಡಿಯಿಂದ ಪಕ್ಕದಲ್ಲಿ ಟಿಪ್ಪರ್ ಮತ್ತು ಜೆಸಿಬಿ ನಿಲ್ಲಿಸಿದ ಸ್ಥಳಕ್ಕೆ ಕರೆದುಕೊಂಡು ಹೋಗಿರುತ್ತಾರೆ. ಹೊನ್ನಾವರದಿಂದ ಭಟ್ಕಳಕ್ಕೆ ಹೋಗುವ ರಾಷ್ಟ್ರೀಯ ಹೆದ್ದಾರಿಯ ಬಲಬದಿಗೆ ನಮ್ಮ ಹೋಟೆಲ್ ಇರುತ್ತದೆ. ನನ್ನ ಹೋಟೆಲ್‌ನ ಎಡಬದಿಗೆ ಇರುವ ಅಂಗಡಿಯಲ್ಲಿ ಕಳುವಾಗಿತ್ತು. ಲಾರಿ ಮತ್ತು ಜೆಸಿಬಿ ನಮ್ಮ ಹೋಟೆಲ್‌ನಿಂದ ಸುಮಾರು 20 ಮೀಟರ್ ದೂರದಲ್ಲಿ ನಿಲ್ಲಿಸಲಾಗಿತ್ತು. ಕಳ್ಳತನ ಆದ ದಿನದಿಂದ ಪಂಚನಾಮೆ ಮಾಡುವವರೆಗೂ ಲಾರಿ ಮತ್ತು ಜೆಸಿಬಿ ನಿಂತಿದ್ದ ಸ್ಥಳದಲ್ಲೇ ನಿಂತಿದ್ದವು. ಘಟನಾ ಸ್ಥಳದಲ್ಲಿ ಬರವಣಿಗೆ ಮಾಡಿ ನನ್ನ ಸಹಿ ತೆಗೆದುಕೊಂಡಿರುತ್ತಾರೆ. ಪಂಚನಾಮೆಯನ್ನು ಲ್ಯಾಪಟಾಪನಲ್ಲಿ ಮಾಡಲಾಗಿರುತ್ತದೆ. ಪಂಚನಾಮೆ ಟೈಪ್ ಮಾಡಲು ಯಾರು ಮಾಹಿತಿ ಕೊಟ್ಟಿರುತ್ತಾರೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಓದಿ ಸಹಿ ಮಾಡಿದ್ದೇನೆ. ಪಂಚನಾಮೆಯಲ್ಲಿ ಚಕ್ ಬಂದಿ ಬರೆದಿರುವುದು ನೆನಪಿಲ್ಲ. ಪಂಚನಾಮೆಯನ್ನು ಮಧ್ಯಾಹ್ನ 12-00 ರಿಂದ 02-00 ಗಂಟೆಯವರೆಗೆ ಮಾಡಿರುತ್ತಾರೆ. ಪಂಚನಾಮೆ ಆದ ನಂತರ ಪುನಃ ಸ್ಟೇಶನಗೆ ಹೋಗಿದ್ದೇನೋ ಇಲ್ಲವೋ ನೆನಪಿಲ್ಲ. ಠಾಣೆಯಲ್ಲಿ ನನ್ನ ಸಹಿ ತೆಗೆದುಕೊಂಡಿರಬಹುದು, ಸರಿಯಾಗಿ ನೆನಪಿಲ್ಲ. ಪಂಚನಾಮೆಗೆ ಠಾಣೆಯಲ್ಲಿ ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪಿಎಸ್‌ಐ ರವರ ಪರಿಚಯ ಇರುವುದರಿಂದ ಅವರು ಹೇಳಿದಂತೆ ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**